# ಮೊಬೈಲಾಗಿ ಕಾಡಿತ್ತು ಮಾಯೆ!

ಶೀರ್ಷಿಕೆ ನೋಡಿ ಹೆದರಿಕೊಳ್ಳಬೇಡಿ, ನಾನಿಲ್ಲಿ ಮೊಬೈಲು (ಅಂದ್ರೆ ಮೊಬೈಲ್ ಫೋನ್), ಅದರ ಉಪಯೋಗ, ಅದರ ಅನುಕೂಲಗಳು, ಅದು ಸೃಷ್ಟಿಸುವ ಅನಾನುಕೂಲಗಳು, ಈಗಿನ ಯುವ ಪೀಳಿಗೆಯ ಮೇಲೆ ಅದರ ದುಷ್ಪರಿಣಾಮಗಳ ಬಗ್ಗೆ ನಿಬಂಧವನ್ನು ಬರೆಯ(ಕೊರೆಯ) ಹೊರಟಿಲ್ಲ. ನಾನು ಹೇಳ ಹೊರಟಿರುವುದು ಈ ಮೊಬೈಲೆಂಬ ಯಕಃಶ್ಚಿತ್ ಯಂತ್ರ ಹೇಗೆ ಮಾಯೆಯಾಗಿ ನನ್ನ ಕಾಡಿತು, ನನ್ನ ನಿದ್ದೆ ಗೆಡಿಸಿತು ಅನ್ನೋದನ್ನ.

ನಾನು ನನ್ನ ಮೊಬೈಲ್ ಕಳೆದುಕೊಂಡೆ! ನೀವ್ಯಾರಾದ್ರೂ, ಯಾವಾಗ್ಲಾದ್ರೂ ಕಳ್ಕೊಂಡಿದೀರಾ–ನಿಮ್ಮ ಮೊಬೈಲು? ಕಳೆದುಕೊಂಡ ಕೂಡಲೇ ಯಾವುದೋ ಫಾರ್ವರ್ಡಿಸಲ್ಪಟ್ಟ ಇ–ಮೇಲ್‌ನಲ್ಲಿದ್ದ ಹಾಗೆ ಯಾವ್ಯಾವುದೋ ಅಂಕಿಗಳ ಸರಣಿಯನ್ನೊತ್ತಿದರೆ (ನಿಮ್ಮ ಮೊಬೈಲಿನಲ್ಲಿ) ಬರುವ ಹದಿನಾರು ಅಂಕಿಗಳ ಕೋಡನ್ನು (code–ಉ) ಎಲ್ಲೋ ಬರೆದಿಟ್ಟುಕೊಂಡಿದ್ದು ನೆನಪಾಗಿ, ಎಲ್ಲ ಕಡೆ ಹುಡುಕಾಡಿ, ಯಾವುದೋ ದಿನಚರಿಯ ಯಾವುದೋ ಪುಟದಂಚಿನಲ್ಲಿ ಬರೆದಿಟ್ಟದ್ದು ಸಿಕ್ಕಿ, ಸಂತೋಷದಿಂದ ಉದ್ಗಾರಗೈದು, ನಂತರ ನಿಮ್ಮ ಮೊಬೈಲ್ ಸೇವಾಕರ್ತರಿಗೆ (service providers)ಗೆ ಫೋನ್ ಮಾಡಿ (ನಿಮ್ಮ ಮೊಬೈಲ್‌ನಿಂದಲ್ಲ!) ಅವರಿಗೆ ಈ ಕೋಡ್ ಉದುರಿಸಿ, ಅದನ್ನು ನಿಷ್ಕ್ರಿಯಗೊಳಿಸಬೇಕಾಗಿ ಕೋರುತ್ತೀರಾ ಅಲ್ಲವೇ? ನಿಜಾ ಹೇಳ್ರೀ, ನಿಮ್ಮಲ್ಲಿ ಅಥವಾ ನಿಮ್ಮ ಸ್ನೇಹಿತರಲ್ಲಿ ಯಾರಾದ್ರೂ ಮೊಬೈಲ್ ಕಳಕೊಂಡು, ಈ ಮೇಲೆ ಹೇಳಿದ್ದನ್ನೆಲ್ಲ ಮಾಡಿ, 'ಸಧ್ಯ, ನನ್ನ ಮೊಬೈಲ್ ನನಗೆ ಸಿಗದಿದ್ದರೂ ಕದ್ದವನಿಗೂ ದಕ್ಕಲಿಲ್ಲವಲ್ಲಾ' (ಆ ಈ–ಮೇಲ್‌ನ ಪ್ರಕಾರ ನೀವು ಮೊಬೈಲ್‌ನ್ನು ನಿಷ್ಕ್ರಿಯಗೊಳಿಸಬಹುದೇ ಹೊರತು, ವಾಪಸ್ಸು ಪಡೆಯಲು ಯಾವುದೇ ಮಾರ್ಗವಿಲ್ಲ!) ಎಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದೀರೇನ್ರೀ? ಎಲ್ಲಾ ಸುಳ್ಳು ಕಣ್ರೀ, ನನಗೆ ಗೊತ್ತಾಗಿ ಹೋಯ್ತು!

ಹಾಗಂತ ನನ್ನ ಮೊಬೈಲ್ ಕಳೆದುಕೊಂಡ ಕೂಡಲೇ ನಾನು ಮೇಲೆ ಪಟ್ಟಿ ಮಾಡಿದ ಕಾರ್ಯಗಳನ್ನೆಲ್ಲ ಮಾಡಿ, ಅದೆಲ್ಲ ಸುಳ್ಳು ಅಂತಾ ಕಂಡು ಕೊಳ್ಳಲಿಲ್ಲ, ಅಸಲಿಗೆ ನಾನು ನನ್ನ ಮೊಬೈಲಿನ ಆ ಹದಿನಾರು ಅಂಕಿಗಳ ಕೋಡನ್ನು ಎಲ್ಲಿಯೂ ಬರೆದಿಟ್ಟಿರಲಿಲ್ಲ. ಹಾಗಾಗಿ ನನ್ನ ಮೊಬೈಲ್ ಕಳೆದುಕೊಂಡಾಗ ಇದೆಲ್ಲ ಸುಳ್ಳು, ಎಲ್ಲವೂ ಸುಳ್ಳು, ಇಡೀ ಜಗತ್ತೇ ಸುಳ್ಳು ಎಂಬಿತ್ಯಾದಿ ('ಎಲ್ಲಾ ಸುಳ್ಳೂ, ಎಲ್ಲವೂ ಸುಳ್ಳು' ಅನ್ನೋ ಹಳೆಯ ಕನ್ನಡ ಚಿತ್ರಗೀತೆಯಂತೆ) ಭಾವ ನನ್ನನ್ನು ಆವರಿಸಿಬಿಟ್ಟಿತು!

ಈಗ ಅಸಲು ವಿಷಯಕ್ಕೆ ಬರೋಣ, ನಾನು ನನ್ನ ಮೊಬೈಲ್ (ಫೋನ್) ಕಳೆದುಕೊಂಡೆ. ಕಳುವಾಯ್ತು ಅನ್ನೋಕಿಂತ ನಾನು ಕಳಕೊಂಡೆ ಅನ್ನೋದೇ ಸರಿ. ಯಾಕಂದ್ರೆ ಸಂಜೆ ಆರುಗಂಟೆಗೆ ಆಫೀಸಿನಿಂದ ನನ್ನ ಬೈಕಿನಲ್ಲಿ ಹೊರಟು, ತುಂಬು–ಟ್ರಾಫಿಕ್ಕಿನಲ್ಲಿ ಸೆಕಂಡ್ ಗೇರ್‌ನಲ್ಲೇ ತೊನೆದಾಡುತ್ತ, ಆಮೆಗತಿಯಲ್ಲಿ ರೂಮು ತಲುಪುವ ಹೊತ್ತಿಗೆ, ತೊಟ್ಟುಕೊಂಡಿದ್ದ ಜರ್ಕಿನ್‌ನ ಹೊರ ಜೇಬಿನಲ್ಲಿದ್ದ ನನ್ನ ಮೊಬೈಲ್ ನನ್ನನ್ನು ತೊರೆದಾಗಿಯಾಗಿತ್ತು!

ಮೊದಲೇ ಹೇಳಿದಂತೆ, ನನ್ನನ್ನು ಶೂನ್ಯತಾಭಾವ ಆವರಿಸಿಕೊಂಡಿತು. ಬೆಳಗಾಗುವ ಹೊತ್ತಿಗಾದರೂ ಯಾರಾದರೂ ನನ್ನ ಸ್ನೇಹಿತರನ್ನೋ, ಮೊಬೈಲಿನಲ್ಲಿ ಇದ್ದ ಇತರ ಫೋನ್–ನಂಬರ್‌ಗಳಿಗೋ ಕರೆ ಮಾಡಿ, ನನ್ನನ್ನು ಹುಡುಕಿಕೊಂಡು, ನನ್ನ ಮೊಬೈಲ್ ವಾಪಸ್ಸು ಕೊಡಲು ಬರಬಹುದು ಅಂತೆಲ್ಲ ಕಾದೆ, ಎಲ್ಲ ವ್ಯರ್ಥವಾಯಿತು.

ಹಿಂದಿನ ದಿನ ಮಧ್ಯಾಹ್ನವೇ ನನ್ನ ಮೊಬೈಲ್ ಚಾರ್ಜ್ ಇಲ್ಲದೇ ಕೊನೆಯುಸಿರೆಳೆದಿತ್ತು. ಅದರ ಚಾರ್ಜರ್ ಮನೆಯಲ್ಲಿತ್ತು. ಆದರೂ ಮೊಬೈಲ್‌ನಲ್ಲಿ ಚಾರ್ಜ್ ಇಲ್ಲದೇ ಅದು ಸ್ವಿಚ್ ಆಫ್ ಆಗಿದಿದ್ದರೆ ಏನಂತೆ, ಸಿಕ್ಕವರಿಗೆ ಅದನ್ನು ವಾಪಸ್ಸು ಮಾಡುವ ಒಳ್ಳೇ ಮನಸ್ಸಿದ್ದಿದ್ದರೆ ಇಷ್ಟು ಹೊತ್ತಿಗೆ, ಅದನ್ನು ಚಾರ್ಜ್ ಮಾಡಿ, ನನಗೆ ಕರೆ ಮಾಡುತ್ತಿರಲಿಲ್ಲವೇ?

ಎರಡು ಸಾವಿರದ್ಮೂರನೆಯ ಇಸವಿಯಷ್ಟು ಹಳೆಯ ಫಿಲಿಪ್ಸ್ (ಆಶ್ಚರ್ಯ ಪಡಬೇಡಿ, ಫಿಲಿಪ್ಸ್‌ನವೂ ಮೊಬೈಲ್ ಫೋನ್ ಬರ್ತಾ ಇದ್ದವು, ನಮ್ ಕಾಲದಲ್ಲಿ!) ಫೋನು, ಅದಕ್ಕಾಗುವ ಚಾರ್ಜರ್ ಬರೀ ನನ್ನ ಹತ್ರ ಮಾತ್ರವೇ ಇರೋದೇ? ಒಳ್ಳೇ ಮನಸ್ಸಿದ್ದರೆ, ಅದು ಸಿಕ್ಕವರು ಹೇಗಾದರೂ ಮಾಡಿ, ಫಿಲಿಪ್ಸ್ ಚಾರ್ಜರ್ ಹುಡುಕಿ, ಮೊಬೈಲ್ ಚಾರ್ಜ್ ಮಾಡಿ, ಅದರ ಮೂಲಕ ನನ್ನ ಯಾವುದಾದರೂ ಸ್ನೇಹಿತರಿಗೆ ಕರೆ ಮಾಡಿ, ಅದನ್ನು ನನಗೆ ತಲುಪಿಸುವ ಪ್ರಯತ್ನ ಮಾಡುತ್ತಿದ್ದರಲ್ಲವೇ?

ಅಲ್ಲದೇ ನನ್ನ ಮೊಬೈಲಿನ ತಲೆಯೊಳಗಿದ್ದ ಪ್ರೀ–ಪೇಯ್ಡ್ ಸೇವೆ ಎರಡು ದಿನದ ಹಿಂದೆಯಷ್ಟೇ ರದ್ದಾಗಿತ್ತು! ಹಾಗಾಗಿ, ನಾನು ನನ್ನ ನಂಬರಿಗೆ ಕರೆ ಮಾಡುವ ಪ್ರಯತ್ನ ಹೀಗೂ ವ್ಯರ್ಥವಾಯಿತು. ಆದರೇನಂತೆ? ಒಳ್ಳೆಯ ಮನಸ್ಸಿದ್ದವರು ನನ್ನ ಮೊಬೈಲ್‌ಗೆ ಸ್ವಲ್ಪವಾದರೂ ಕರೆನ್ಸಿ ಹಾಕಿಸಿ, ನಂತರ ನನ್ನ ಸ್ನೇಹಿತರನ್ನು ಸಂಪರ್ಕಿಸುವ ಪ್ರಯತ್ನ ಮಾಡುತ್ತಿದ್ದರಲ್ಲವೇ ಅಥವಾ ನಾನು ಮಾಡುವ ಕರೆಗಳನ್ನಾದರೂ ಸ್ವೀಕರಿಸುವ ಸ್ಥಿತಿಯಲ್ಲಿ ಇಟ್ಟಿರುತಿದ್ದರಲ್ಲವೇ?

ಮುಂದೆರಡು ದಿನ ನನ್ನ ಆಫೀಸ್ ಫೋನ್‌ನಿಂದ ತಲೆಯಲ್ಲಿದ್ದ ನಂಬರುಗಳ ಸ್ನೇಹಿತರಿಗೆಲ್ಲ (ಸ್ನೇಹಿತರ ನಂಬರುಗಳಲ್ಲ!) ಕರೆ ಮಾಡಿ, ಅವರಿಗೆ ನನ್ನ ಮೊಬೈಲಿನಿಂದ ಕರೆ ಬಂದಿತೇ? ಸಂದೇಶ ಬಂದಿತೇ? ಎಂದೆಲ್ಲ ವಿಚಾರಿಸಿಕೊಂಡೆ! ನನ್ನ ದುರಾದೃಷ್ಟಕ್ಕೆ, ನನ್ನ ಮೊಬೈಲು ಯಾವನೋ ಕ್ರೂರಿ, ಮೋಸಗಾರ, ಕಪಟಿಯೊಬ್ಬನಿಗೆ ಸಿಕ್ಕಿಬಿಟ್ಟಿತ್ತು. ಹಾಗಾಗಿ ವಾರ ಎರಡಾದರೂ ನನ್ನ ಮೊಬೈಲಿನ ಸುಳುಹು ಹತ್ತಲಿಲ್ಲ, ನಾನು ಹತಾಶನಾದೆ.

ನಾನು ಹತಾಶನಾಗುವುದಕ್ಕೆ, ಎರಡು ಸಾವಿರದ್ಮೂರನೇ ಇಸವಿಯ, ಸೇವೆ ರದ್ದಾದ, ಚಾರ್ಜ್ ಇಲ್ಲದೇ ಉಸಿರು ನಿಂತು ಹೋಗಿದ್ದ, ಮಧ್ಯದ ಜಾಯ್-ಸ್ಟಿಕ್ ಅಲುಗಾಡುತ್ತಿದ್ದ ಫಿಲಿಪ್ಸ್ ಮೊಬೈಲ್ ಅಷ್ಟೇ ಕಾರಣವಾಗಿರಲಿಲ್ಲ! ಮೊಬೈಲು ಕೊಂಡಾಗಿನಿಂದ ಕಷ್ಟ ಪಟ್ಟು ನಾನು ಸಂಗ್ರಹಿಸಿದ್ದ ಸುಮಾರು (ಸ್ವಲ್ಪೇ ಸ್ವಲ್ಪ) ಹುಡುಗಿಯರ ಮೊಬೈಲ್ ನಂಬರ್‌ಗಳಿದ್ದವು ಅದರಲ್ಲಿ!

ಅವುಗಳನ್ನೆಲ್ಲ ಕಳೆದುಕೊಂಡವನಿಗೆ ಮತ್ತೆ ಅವುಗಳನ್ನೆಲ್ಲ ಸಂಗ್ರಹಿಸುವ ದಾರಿ ತೋರದೇ ತಲೆ ಕೆಟ್ಟು ಹೋಯಿತು. ಇಡೀ ಪ್ರಪಂಚವೇ ಸುಳ್ಳು, ನನ್ನಂತವನನ್ನೂ ಇದು ಬಿಡದೇ ತನ್ನ ಮೋಸದ ದಿನಚರಿಯ ದಾಳವನ್ನಾಗಿ ಮಾಡಿಕೊಂಡಿತಲ್ಲ ಎಂದೆಲ್ಲ ಯೋಚಿಸಿ ಬೇಜಾರಾಯಿತು, ಮೊಬೈಲು, ಅದರೊಳಗಿದ್ದ ನಂಬರುಗಳು, ನಂಬರುಗಳ ಹುಡುಗಿಯರು, ಅವರ ಪ್ರಪಂಚ, ಎಲ್ಲವೂ ನೀರಸ, ಕ್ಷಣಿಕ, ನಶ್ವರ ಅನಿಸಿತು!

--------

ನನ್ನ ಮೊಬೈಲ್ ಕಳೆದುಕೊಂಡು ಒಂದು ತಿಂಗಳಾಗಿತ್ತು. ಹೀಗೇ ಮೊಬೈಲ್ ಇಲ್ಲದ ಜೀವನದ ನಶ್ವರತೆಯ ಬಗ್ಗೆ ಯೋಚನೆ ಮಾಡುತ್ತ, ಫೋರಮ್‌ನಲ್ಲಿ ಪಿವಿಆರ್ ಚಿತ್ರ ಮಂದಿರದ ಮೆಟ್ಟಿಲುಗಳ ಮೇಲೆ ಸ್ನೇಹಿತನಿಗೋಸ್ಕರ ಕಾಯುತ್ತ ಕುಳಿತಿದ್ದೆ. ಫೋರಮ್ ತುಂಬಾ ಹುಡುಗರು-ಹುಡುಗಿಯರಿದ್ದರು. ಅವರನ್ನು ನೋಡಿ ನನಗೆ ನಾನು ಕಳೆದುಕೊಂಡ (ಹುಡುಗಿಯರ) ನಂಬರ್‌ಗಳು, ತನ್ಮೂಲಕ ಆ ಹುಡುಗಿಯರೂ ನೆನೆಪಿಗೆ ಬಂದರು. ಇನ್ನೂ ನಾನು ಹೊಸ ಮೊಬೈಲ್ ಖರೀದಿ ಮಾಡಿರಲಿಲ್ಲ, ಹಾಗಾಗಿ ಕಳೆದು ಹೋದ ನನ್ನ ಮೊಬೈಲಿನಲ್ಲಿದ್ದ ಹುಡುಗಿಯರ ಸಂಖ್ಯೆಯ ಅರ್ಧದಷ್ಟು ನಂಬರ್‌ಗಳೂ ಮರಳಿ ನನ್ನ ಕೈ ಸೇರಿರಲಿಲ್ಲ.

ಹೀಗೆಲ್ಲ ಶೂನ್ಯದ ಬಗ್ಗೆ ಯೋಚಿಸುತ್ತ ಕುಳಿತವನಿಗೆ ನಾಲ್ಕು ಮೆಟ್ಟಿಲುಗಳ ಕೆಳಗೆ ಮಾಲೀಕನ(ಳ)ನ್ನು ಕಳೆದುಕೊಂಡ ಒಂದು ತಬ್ಬಲಿ ಮೊಬೈಲ್ ಕಾಣಿಸಿತು. ನಾನು ತಕ್ಷಣ ಕುಳಿತುಕೊಂಡಿದ್ದ ಹಾಗೇ ಜಾರಿ, ಅದರೆಡೆಗೆ ಸರಿದು, ಅದನ್ನು ಎತ್ತಿಕೊಂಡೆ. ಆಗಲೇ ಅದಕ್ಕೆ ಫೋರಮ್ಮು, ಫೋರಮ್ಮಿನ ಜನ ಸಂದಣಿ ಎಲ್ಲ ನೋಡಿ ಗಾಬರಿಯಾಗಿತ್ತು ಅನಿಸುತ್ತೆ, ನಾನು ಮೆಲ್ಲನೆ ನನ್ನ ಶರ್ಟ್ ಜೇಬಿನ ಬೆಚ್ಚಗಿನ ಸುರಕ್ಷತೆಯೊಳಕ್ಕೆ ಇಳಿಬಿಟ್ಟೆ. ನಂತರ ಏನನ್ನೋ ಯೋಚಿಸಿ, ಅತ್ತಿತ್ತ ನೋಡುತ್ತ, ವಾಪಸ್ಸು ಜೇಬಿನಿಂದ ಆ ಮೊಬೈಲನ್ನು ತೆಗೆದು, ಸ್ವಿಚ್ ಆಫ್ ಮಾಡಿ, ಹಿಂತಿರುಗಿಸಿ ಅದರ ಒಡಲು ತೆರೆದು, ಹಳೆಯ ಮಾಲೀಕತ್ವದ ಸಂಕೋಲೆಯ ಸಂಕೇತವಾದ ಸಿಮ್ ಕಾರ್ಡನ್ನು ತೆಗೆದೆ, ಅದನ್ನು ಬಂಧಮುಕ್ತಗೊಳಿಸಿದೆ. ಮೊಬೈಲ್ ಮೂಕರೋದನಗೈಯ್ಯುತ್ತಿತ್ತು, ನೋವಾಗದಂತೆ ವಾಪಸ್ಸು ಅದರ ಹೊಟ್ಟೆ ಮುಚ್ಚಿ, ಮುಂದಕ್ಕೆ ತಿರುಗಿಸಿ ನೋಡಿದೆ, ನೋಕಿಯಾ ಎನ್-೭೦! ಮತ್ತೆ ಅದನ್ನೂ, ಬೇಡವಾದ ಸಿಮ್ ಕಾರ್ಡನ್ನು ನನ್ನ ಜೇಬಿಗೆ ಸೇರಿಸಿದೆ, ಸರಿಯಾದ ಸಮಯಕ್ಕೆ ನನ್ನ ಸ್ನೇಹಿತ ಪ್ರತ್ಯಕ್ಷನಾದ. ನಾವಿಬ್ಬರೂ ಫಿಲ್ಮ್ ನೋಡಲು ಹೋದೆವು.

--------

ನೋಡಿ, ಅದೃಷ್ಟ ಹೇಗೆ ಒದ್ದುಕೊಂಡು ಬರುತ್ತೆ ಅಂತಾ. ನಾನು ಇಂಥಾ ಅದೃಷ್ಟಗಳಿಗೆಲ್ಲ ದೂರದವನು ರೀ. ನನಗ್ಯಾವತ್ತೂ ರಸ್ತೆ ಮೇಲೆ ಒಂದ್ರುಪಾಯಿ ದುಡ್ಡು ಸಿಕ್ಕಿಲ್ಲ, ಒಂದು ಕೇಜಿ ಚಿನ್ನ ಗೆಲ್ಲುವ ಟೀ ಪುಡಿಯ ಪ್ಯಾಕೆಟ್ಟಿನಲ್ಲಿ ನನಗೆ ಕಡೇ ಪಕ್ಷ 'ಉಚಿತ ಗಾಜಿನ ಬಾಟಲಿ'ಯ ಕೂಪನ್ ಕೈತ ಸಿಕ್ಕಿಲ್ಲ, ಲಾಟರಿಯಲ್ಲಿ 'ಐದು ಸಾವಿರ ಜನರಿಗೆ ತಲಾ ಐನೂರು ರೂ ಬಹುಮಾನ'ದಂತಹ ಕಿಂಚಿತ್ ಅದೃಷ್ಟವೂ ಒಲಿದಿಲ್ಲ, ನನ್ನ ಸ್ನೇಹಿತರಂತೆ ಅಚಾನಕ್ಕಾಗಿ ಹುಡುಗಿಯರ ನಂಬರ್ರು ಸಿಕ್ಕಿಲ್ಲ, ಪ್ರೇಮವಾಗಿಲ್ಲ, ಆದ (ನಾನಂದುಕೊಂಡ) ಪ್ರೇಮ ದಕ್ಕಿಲ್ಲ!

ಈ ಇಪ್ಪತ್ತೇಳು ವರ್ಷಕ್ಕೆ ಇದೇ ಮೊದಲು ನೋಡಿ, ನನಗೆ ನನ್ನ ಅದೃಷ್ಟದ ಮೇಲೆ ನಂಬಿಕೆ ಬಂದಿದ್ದು. ಅದೇನೋ ಹೇಳ್ತಾರಲ್ಲ, ಭಾಗ್ಯ ಬಂದರೆ, ಬಾಗಿಲು ತುಂಬಿ ಬರುತ್ತೆ ಅಂತಾ ಹಾಗಾಯ್ತು ನನ್ನ ಸ್ಥಿತಿ. ನಾನು ಮೊಬೈಲ್ ಕಳೆದುಕೊಂಡು ತಿಂಗಳಾಗಿದೆ, ಈಗ ನನಗೊಂದು ಮೊಬೈಲ್ ಸಿಕ್ಕಿದೆ, ಅದೂ ಎನ್-೭೦!

ಸಿನೆಮಾ ನೋಡುತ್ತ ನೋಡುತ್ತ ನನಗೆ ಅದೃಷ್ಟದ ಬಗ್ಗೆ, ಈ ಜಗತ್ತಿನ ಬಗ್ಗೆ, ಇನ್ನೂ ಅದರಲ್ಲಿರೋ ಒಳ್ಳೇತನದ ಬಗ್ಗೆ, ಎಲ್ಲವನ್ನೂ ಸರಿದೂಗಿಸುವ ಪ್ರಕೃತಿ ನಿಯಮದ ಬಗೆಗೆಲ್ಲ ನಂಬಿಕೆ ಮೂಡಲಾರಂಭಿಸಿತು. ನಾವು ನೋಡುತ್ತಿದ್ದುದು ಹಾಸ್ಯಮಯ ಅನಿಮೇಟೆಡ್ ಸಿನೆಮಾವಾಗಿದ್ದರೂ ನಗದೇ ಬಿಮ್ಮಗೆ, ಒಂಥರಾ ಪೆಚ್ಚು ನಗೆಯ ಮುಖ ಹೊತ್ತು ಕುಳಿತ ನನ್ನನ್ನು ನೋಡಿ, ನನ್ನ ಸ್ನೇಹಿತ ಮೂರ್ನಾಲ್ಕು ಸಾರಿ, ನಗುವುದನ್ನು ನಿಲ್ಲಿಸಿ, "ಯಾಕೋ? ಫಿಲ್ಮ್ ಇಷ್ಟ ಆಗ್ಲಿಲ್ವೇನೋ? ಮೈಯಲ್ಲಿ ಹುಶಾರಿಲ್ಲವೇನೋ?" ಅಂತೆಲ್ಲ ಕೇಳಿಬಿಟ್ಟ!

ಸಿನೆಮಾ ಮುಗಿಸಿ ನನ್ನ ರೂಮಿಗೆ ಬಂದೆ. ನನ್ನಲ್ಲಿದ್ದ ಹಳೆಯದೊಂದು ಸಿಮ್ ಕಾರ್ಡ್ ಹಾಕಿ ಸ್ವಿಚ್–ಆನ್ ಮಾಡಿದೆ, ಸಿಕ್ಕ ಎನ್–೭೦ ಯನ್ನ! ಓಹ್! ಏನು ಚೆನ್ನಾಗಿದೆ ಅಂತೀರಾ ಮೊಬೈಲು? ಮೊದಲ ನೋಟಕ್ಕೇ ನನಗೆ ಅದರ ಮೇಲೆ ಪ್ರೀತಿ ಬೆಳೆಯಿತು. ನಾನು ಯಾವಾಗಲೂ ಎಲ್ಲರ ಮೊಬೈಲಿನಲ್ಲೂ ಮಾಡುವಂತೆ (ಕೆಟ್ಟ ಬುದ್ದಿ ಸುಟ್ಟರೂ...!) ಅದರ ಎಸ್ಸೆಮ್ಮೆಸ್ಸುಗಳೊಳಕ್ಕೆ ಹೋಗಿ ನೋಡಿದೆ, ಎಲ್ಲವನ್ನೂ ಅಳಿಸಿ ಹಾಕಲಾಗಿತ್ತು, ಅಥವಾ ಇದು ತೀರಾ ಹೊಸಾ ಮೊಬೈಲಾ?

ಎಸ್ಸೆಮ್ಮೆಸ್‌ನಿಂದ ಹೊರಬಂದವನಿಗೆ ಕಂಡಿದ್ದು, ಕ್ಯಾಮೆರಾ ಕಣ್ಣು ಮತ್ತು ಈ ಕ್ಯಾಮೆರಾದಿಂದ ತೆಗೆದಿರಬಹುದಾದ ಫೋಟೋಗಳು! ತಕ್ಷಣ ಫೋಟೋಗಳಿಗೆ ತಗುಲಿಕೊಂಡವನಿಗೆ ಕಂಡಿದ್ದು ಹದಿನಾಲ್ಕು ಚಿತ್ರಗಳು, ಮತ್ತು ನನ್ನ ನಿದ್ದೆ ಕೆಡಿಸಿದ್ದು ಆ ಹದಿನೈದೂ ಚಿತ್ರಗಳಲ್ಲಿದ್ದ ಹುಡುಗಿ!

ಹದಿನೈದು ಫೋಟೋಗಳನ್ನೂ ಆಕೆಯೇ ಸ್ವತಃ ಶೂಟ್ ಮಾಡಿಕೊಂಡಿದ್ದು ಗೊತ್ತಾಗುತ್ತಿತ್ತು! ತೋಳು ಚಾಚಿ, ತುಟಿ ಕಚ್ಚಿ, ನಕ್ಕು, ಕಣ್ಣು ಮಿಟುಕಿಸಿ, ಛೇಡಿಸುವಂತೆ ಮುಖ ಮಾಡಿಕೊಂಡು, ಪೂರ್ತಿ ಚತುರ್ದಶ(!) ರಸಗಳ ಭಾವ–ಭಂಗಿಯನ್ನು ಕಂಡು ನನ್ನ ಅಂದಿನ ನಿದ್ದೆ ಹಾರಿ ಹೋಯಿತು.

ಈ ಮೊಬೈಲ್ ಕಳೆದುಕೊಂಡ ಈ ಹುಡುಗಿ ಎಷ್ಟೊಂದು ಬೇಜಾರಾಗಿರಬಹುದು? ಅವಳು ಎಷ್ಟೊಂದೆಲ್ಲ ಶಾಪ ಹಾಕಿರಬಹುದು? ಇಷ್ಟು ಹೊತ್ತಿಗಾಗಲೇ ಜಗತ್ತಿನ ಒಳ್ಳೇತನದ ಬಗ್ಗೆ ಅವಳಿಗೆ ನಂಬಿಕೆಯೇ ಹೊರಟು ಹೋಗಿರಬಹುದು! ಛೇ ಇಂತಹ ಹುಡುಗಿಯ ದುಃಖಕ್ಕೆ ಕಾರಣನಾದೆನಲ್ಲ ನಾನು! ಇದನ್ನು ವಾಪಸ್ಸು ಕೊಟ್ಟರೆ ಹೇಗೆ?

ಹಗಲು ರಾತ್ರಿಯೆಲ್ಲ ಇದೇ ವಿಷಯವಾಗಿ ಯೋಚಿಸಿದೆ, ಮನೋಮಂಥನ ನಡೆಸಿದೆ! 'ನಿನ್ನ ಗುಜರಿ–ಮೊಬೈಲಿಗೆ ಬದಲಾಗಿ ಇಂಥಾ ಫಸ್ಟ್ ಕ್ಲಾಸ್ ಮೊಬೈಲ್ ಸಿಕ್ಕಿದೆ, ಅಂಥಾದ್ದರಲ್ಲಿ ಏನೇನೋ ಯೋಚನೆ ಮಾಡಿ, ಇದನ್ನು ಕಳೆದುಕೊಳ್ಳುವುದು ಮೂರ್ಖತನದ ಪರಮಾವಧಿ' ಎಂದು ನನ್ನ ಬುದ್ಧಿ ಹೇಳಿತು. ನನ್ನ ಹೃದಯ ಬೇರೆಯದೇ ವಾದ ಹೂಡಿತು. 'ನಿನ್ನಂತಹ ದುರಾದೃಷ್ಟವಂತನ ಅದೃಷ್ಟವೂ ಬದಲಾಗುವ ಸಮಯ ಬಂದಿದೆ ಅಂತಾ ನಿನಗನಿಸ್ತಾ ಇಲ್ವೇ? ಈ ಮೊಬೈಲ್ ಮೂಲಕ ನೀನು ಆ ಹುಡುಗಿಯನ್ನ ತಲುಪ ಬಹುದು, ಆ ಹುಡುಗಿಯ ಸಖ್ಯ ಬೆಳೆಸಬಹುದು! ಬರೀ ಹದಿನೈದು ಸಾವಿರದ ಮೊಬೈಲು ಸಿಕ್ಕಿದ್ದೇ ಅದೃಷ್ಟ ಅಂತಾ ನೀನು ಸುಮ್ಮನಾದರೆ ಇನ್ನು ಮುಂದೆ ದೊರಕಬಹುದಾದ ಮಹದೈಶ್ವರ್ಯವನ್ನು ಕಳೆದುಕೊಳ್ಳುತ್ತೀಯಾ! ಹುಡುಗಿ–ಸ್ನೇಹ–ಪ್ರೀತಿ–ಪ್ರೇಮದ ವಿಷಯಗಳಲ್ಲಿ ನೀನು ಭಿಕಾರಿ ಅಂತಾ ಗೊತ್ತಿದೆ ತಾನೇ?'

ಒಂದು ವಾರವೆಲ್ಲ ಯೋಚಿಸಿ, ಯೋಚಿಸಿ ತಲೆ ಕಡೆದ–ಮೊಸರು ಗಡಿಗೆಯಂತಾದ ಮೇಲೆ ನನ್ನ ಹೃದಯದ ವಾದವೇ ಗೆದ್ದಿತು! ಮೊಬೈಲುಗಳಿಗೇನು? ದುಡೀತಾ ಇದೀನಿ, ಸುಲಭವಾಗಿ ನಾನೇ ಕೊಂಡ್ಕೋಬಹುದು, ಹುಡುಗಿ ಸಿಗಲಿ ಅಂತಾ ಯೋಚಿಸಿ, ಒಂದು ಒಳ್ಳೇ ದಿನ ನೋಡಿ, ಅದರೊಂದಿಗೆ ಬಂದಿದ್ದ ಸಿಮ್ ಕಾರ್ಡನ್ನೇ ಅದರ ಹೊಟ್ಟೆಯೊಳಕ್ಕೆ ಹಾಕಿ, ಎನ್–೭೦ಯನ್ನು ಸ್ವಿಚ್ ಆನ್ ಮಾಡಿದೆ. ಸರಿಯಾಗಿ ಒಂದೂವರೆ ದಿನಗಳ ನಂತರ ಮೊಬೈಲಿಗೆ ಮೊದಲ ಕರೆ ಬಂದೇ ಬಿಟ್ಟಿತು.

-------

"ಹಲೋ ಯಾರಿದು?"

"ಶಿವಕುಮಾರ್, ಮತ್ತು ನೀನು?"

ಅವಳು ಹೆಸರು ಹೇಳಲಿಲ್ಲ, "ಇದು ನನ್ನ ಮೊಬೈಲು!"

"ನಂಗೊತ್ತು!"

"ಏನೂ?"

"ನಂಗೊತ್ತು, ಇದು ನನ್ನ ಮೊಬೈಲ್ ಅಲ್ಲ, ಫೋರಂ ಹತ್ರ ಸಿಕ್ಕಿತ್ತು, ನಿನ್ನದೇ ಇರಬಹುದು!"

ಅವಳಿಗೆ ಕಿರಿಕಿರಿಯಾಯಿತೇನೋ, "ಇರಬಹುದು ಏನು? ಇದು ನಂದೇ!" ಅಂದಳು!

"ಸರಿ, ಹೇಳಿದೆನಲ್ಲ, ಇದು ನನ್ನ ಮೊಬೈಲ್ ಅಲ್ಲ, ನನಗೆ ಸಿಕ್ಕಿದ್ದು ಅಂತಾ?"

ಅವಳ ಧ್ವನಿ ಯಾಕೋ ಮೃದುವಾಯಿತು. "ಸರೀ, ನಂಗೆ ವಾಪಸ್ಸು ಕೊಡೋಕೆ ಆಗುತ್ತಾ?"

"ಖಂಡಿತಾ! ಇದನ್ನು ಕಳೆದುಕೊಂಡವರು ಯಾರಾದ್ರೂ ಕಾಲ್ ಮಾಡ್ಲೀ ಅಂತಾನೇ ಇದನ್ನ ಸ್ವಿಚ್ ಆನ್ ಮಾಡಿದ್ದೇನೆ!"

"ಸರಿ! ಎಲ್ಲಿ ಸಿಗೋಣ?" ಅವಳ ಈ ಪ್ರಶ್ನೆ ಕೇಳಿ, ನನ್ನ ಹೃದಯ ಗರಿಗೆದರಿ ಹಾರಾಡಿತು!

"ಅದೇ ಫೋರಮ್‌ನಲ್ಲಿ, ಪಿವಿಆರ್ ಚಿತ್ರಮಂದಿರದ ಮೆಟ್ಟಿಲುಗಳ ಹತ್ತಿರ?"

"ಹ್ಮ್... ಬೇಡ, ಫೋರಂನ ಹೊರಗಡೆ, ಪಾರ್ಕಿಂಗ್ ಲಾಟ್‌ನಲ್ಲಿ ಸಿಗೋಣ್ವಾ?" ಛೇ! ನನ್ನ ಮಂಕುಬುದ್ಧಿಗಿಷ್ಟು! ಪಿವಿಆರ್‌ನ ಮೆಟ್ಟಿಲುಗಳಿಗಿಂತ, ಫೋರಮ್‌ನ ಪಾರ್ಕಿಂಗ್ ಲಾಟ್‌ನಲ್ಲಿ ಸ್ವಲ್ಪ ಜಾಸ್ತಿ ಏಕಾಂತ ಇರುತ್ತೆ, ಮಾತನಾಡೋಕೆ, ಅವಳನ್ನ ಮಾತನಾಡಿಸೋಕೆ, ಅವಳ ನಂಬರ್ ಇಸ್ಕೊಳ್ಳೋಕೆ (ಈಗ ನನ್ನ ಹತ್ರ ಅವಳ ನಂಬರ್ ಇದ್ದರೂ, ನಾನಾಗಿ ಕೇಳಿ ಅವಳಾಗೇ ಕೊಟ್ಟರೆ ಮರ್ಯಾದೆ ತಾನೇ?), ಊಟಕ್ಕೋ ಕಾಫಿಗೋ ಕರೆಯೋಕೆ, ಮುಂದೆ ಬರಲಿರುವ ಕಾರ್ಟೂನ್ ಫಿಲಂ 'ರ್‍ಯಾಟಾಟೂಯಿ'ಗೆ ಅವಳನ್ನು ಕರೆಯುವುದಕ್ಕೆಲ್ಲ ಅದೇ ಪ್ರಶಸ್ತವಾದ ಜಾಗವಲ್ಲವೇ?!

"ಸರಿ! ಆದ್ರೆ ನಿನ್ನ ಹೇಗೆ ಗುರುತು ಹಿಡಿಯೋದು?" ಇದೆಲ್ಲ ಮಾತುಕತೆ, ಅವು ಹೊರಡಿಸುತ್ತಿರುವ ಭಾವವೆಲ್ಲ ಹೊಸ ಪ್ರೇಮಕತೆಯೊಂದರ, ಸುನೀತ ಸಂಬಂಧವೊಂದರ ಆರಂಭವೆಂದೆನಿಸಿ, ನನ್ನ ಮೈಯೆಲ್ಲ ಪುಳಕಗೊಂಡಿತು.

"ನನ್ನ ಮೊಬೈಲ್‌ನಲ್ಲಿ ಇನ್ನೂ ನನ್ನ ಫೋಟೋಗಳಿವೆ ಅಂದ್ಕೋತೀನಿ! ತಡೀ ಒಂದ್ನಿಮಿಷ... ಇವತ್ತು ನಾನು ಬಿಳೀ ಟೀ-ಶರ್ಟು, ನೀಲಿ ಜೀನ್ಸ್ ಹಾಕಿಕೊಂಡಿರ್ತೇನೆ!" ಅವಳ ಮಾತುಗಳ್ಯಾಕೋ ಅಗತ್ಯಕ್ಕಿಂತ ಜಾಸ್ತಿ ಒರಟಾದವೆಂದೆನಿಸಿ ನನ್ನ ಹೃದಯ ನರಳಿತು!

"ಸರಿ, ನಾನು ನೀಲಿ ಟೀ ಶರ್ಟ್, ಕಪ್ಪು ಜೀನ್ಸ್ ಹಾಕಿಕೊಂಡಿರ್ತೀನಿ. ಎಷ್ಟು ಗಂಟೆಗೆ ಬರ್ತೀಯಾ?"

"ಇನ್ನೊಂದ್ ಕಾಲು ಗಂಟೆಗೆ ಅಲ್ಲಿರ್ತೀನಿ!" ಇಷ್ಟು ನುಡಿದು ಅವಳು ಫಕ್ಕನೆ ಕಾಲು (call-ಉ) ಕತ್ತರಿಸಿದಳು! ನಾನು ಲಗುಬಗೆಯಿಂದ ತಯ್ಯಾರಾದೆ!

-------

ಹೊರಗಡೆ ಮದ್ಯಾಹ್ನದ ಬಿಸಿಲು ಪ್ರಖರವಾಗೇ ಇತ್ತು! ನಾನು ನೀಲಿ ಟೀ ಶರ್ಟು-ಕಪ್ಪು ಜೀನ್ಸ್ ತೊಟ್ಟು, ಮಣಗಟ್ಟಲೆ ಡಿಯೋ ಸ್ಪ್ರೇ ಸುರಿದುಕೊಂಡು, ಜೆಲ್‌ನಿಂದ ತಲೆಗೂದಲು ತೀಡಿಕೊಂಡು ತಯ್ಯಾರಾಗಿ, ಹತ್ತು ನಿಮಿಷಕ್ಕೆಲ್ಲ ಫೋರಮ್ ಮಾಲ್‌ನ ಪಾರ್ಕಿಂಗ್ ಲಾಟ್‌ಗೆ ಬಂದು ತಲುಪಿದೆ. ನಾನು, ನನ್ನ ಬೈಕು, ನಾನು ಬಂದು ಬೈಕಿಳಿದ ಪರಿಯನ್ನಾದರೂ ನೋಡಲು ಅವಳಿಲ್ಲಿ ಮೊದಲೇ ಬಂದಿರಬೇಕಾಗಿತ್ತು ಅಂದುಕೊಂಡೆ.

ಕೊನೆಗೂ ನನ್ನಂತಹ ಅದೃಷ್ಟಹೀನನ ಅದೃಷ್ಟವೂ ತಿರುಗಿಕೊಂಡು, ಆಕಾಶದಲ್ಲಿ ದೇವಾನುದೇವತೆಗಳು ನೆರೆದು, ಪುಷ್ಪವೃಷ್ಟಿಮಾಡಿ, ದೇವ ದುಂದುಭಿ ಮೊಳಗಿಸಿ, ತಮ್ಮೊಳಗಿನಿಂದ ಅತೀ ಸುಂದರವಾದ ದೇವಕನ್ಯೆಯೊಬ್ಬಳನ್ನು ನನಗಾಗೇ ಇಳಿಸಿ, ಕಳಿಸಿಕೊಟ್ಟಂತೆ, ಅವಳು ಪೂರ್ತಿ ಮೂವತ್ತೈದು ನಿಮಿಷದ ನಂತರ ಪಾರ್ಕಿಂಗ್ ಲಾಟ್‌ನೊಳಕ್ಕೆ ನಡೆದು ಬಂದಳು!

ಅವಳ ಮೊಬೈಲಿನಲ್ಲಿದ್ದ ಫೋಟೋಗಳಿಗಿಂತ ಅವಳು ನೂರು ಪಟ್ಟು ಸುಂದರವಾಗಿದ್ದಳು, ತಿದ್ದಿ ತೀಡಿದ ಹುಬ್ಬುಗಳು, ಫಳ ಫಳಿಸುವ ಸಣ್ಣ ಕಣ್ಣುಗಳು, ಚೂಪು ಮೂಗು, ಇಷ್ಟಿಷ್ಟೇ ತುಟಿ, ಒಪ್ಪವಾಗಿ ಬಾಚಿ, ಹಿಂದಕ್ಕೆ ಕಟ್ಟಿಕೊಂಡಿದ್ದ ಬೆನ್ನಿನುದ್ದದ ಕೂದಲು, ಕತ್ತಿನ ಇಳಿಜಾರಿನಲ್ಲಿ ಬೆಳ್ಳಿಯ ಚೈನು-ಚೈನಿಗೆ ನೇತುಬಿದ್ದ ಉಂಗುರದ ರಿಂಗು, ಬಲಗೈಯಲ್ಲಿ ಸಣ್ಣ ಕೊಂಡಿ-ಕೊಂಡಿ ಚೈನಿನ ವಾಚು, ಎಡಗೈಯಲ್ಲಿ ಹಾವಿನ ಸುರುಳಿ ಸುತ್ತಿದ ಒಂದೇ ಒಂದು ಬಳೆ, ಕಡೆದ ಶಿಲ್ಪದ ಮೈಯನ್ನಪ್ಪಿಕೊಂಡಿದ್ದ ಬಿಳೀ ಟೀ ಶರ್ಟು, ನೀಲಿ ಜೀನ್ಸು, ಕಾಲುಗಳಲ್ಲಿ ಕಪ್ಪು ದಾರ-ದಾರದಂತಹ ಹೈ-ಹೀಲ್ಡ್ ಚಪ್ಪಲಿ! ಅವಳು ಹತ್ತಿರ ಬಂದಂತೆಲ್ಲ, ಅವಳು ನೇರವಾಗಿ ನನ್ನ ಹೃದಯದ ಮೇಲೇ ನಡೆಯುತ್ತಿದ್ದಾಳೆ ಎಂದೆನಿಸಿ, ನನಗೆ ಎದೆ ನೋವು ಶುರುವಾಯಿತು, ಹೃದಯದ ಬಡಿತ ದ್ವಿಗುಣ-ತ್ರಿಗುಣವಾಗಿ, ಅಗಣಿತ-ಗುಣಿತವಾಯಿತು. ಜೆಲ್ ಹಾಕಿ ಕೂರಿಸಿದ್ದ ನನ್ನ ತಲೆಗೂದಲುಗಳ ಸುಳಿಯೊಳಗೆ ಬೆವರು ಹನಿಯಾಗಿ ಊಟೆಯೊಡೆದು ಹಣೆಯಂಚಿನಲ್ಲಿ ಕಾಣಿಸಿಕೊಂಡಿತು, ಬಾಯಿಯೊಣಗಿ, ಮುಖ ಕೆಂಪಡರಿತು.

ನಾನು ನಕ್ಕೆ, ಅವಳು ಪ್ರತಿಯಾಗಿ ನಕ್ಕಳು. ನಾನು ಕೈ ಮುಂದೆ ಮಾಡಿದೆ, ನಡುಗುವ ಧ್ವನಿಯಲ್ಲಿ ನುಡಿದೆ,

"ಹಾಯ್!"

ಅವಳು ನನ್ನೆಲ್ಲ ಮುಜುಗರವನ್ನು ದೂರಮಾಡುವಂತೆ, ನಿರೀಕ್ಷೆಯ ಆಯಾಸವನ್ನೆಲ್ಲ ಪರಿಹರಿಸುವಂತೆ, ನನ್ನ ಕೈಯೊಳಕ್ಕೆ ತನ್ನ ಸಣ್ಣ ಕೈಯನ್ನಿಟ್ಟು, ಕುಲುಕಿ, ತನ್ನ ಮೈಯ ಬಿಸುಪು, ನುಣುಪು, ಒನಪುಗಳನ್ನೆಲ್ಲ ನನ್ನ ಮನಸ್ಸಿನೊಳಕ್ಕೆ ದಾಖಲು ಮಾಡಿದಳು!

"ಹಾಯ್! ನನ್ನ ಮೊಬೈಲ್?" ಹುಹ್! ತನ್ನ ಹೆಸರು ಹೇಳುತ್ತಾಳೆ ಅಂದುಕೊಂಡರೆ, ನೇರವಾಗಿ ವಿಷಯಕ್ಕೆ ಬಂದಳಲ್ಲ ಇವಳು ಅಂದುಕೊಂಡು, ಜೇಬಿನಿಂದ ತೆಗೆದು, ಅವಳದೇ ಮೊಬೈಲನ್ನು ಅವಳ ಕೈಗಿತ್ತೆ!

ಕ್ಷಣಾರ್ಧದಲ್ಲಿ ಅವಳು ನನ್ನ ಇರುವನ್ನು ಮರೆತವಳಂತೆ, ತನ್ನ ಮೊಬೈಲನ್ನು, ಅದರೆಲ್ಲ ಅಂಗಾಂಗಗಳನ್ನು, ಅದರ ತಲೆಯೊಳಗಿದ್ದ ಮಾಹಿತಿ, ಫೋಟೋ, ಹಾಡು, ಫೋನ್ ನಂಬರುಗಳನ್ನೆಲ್ಲ ಚಕ-ಚಕಾಂತ ನೋಡಿಕೊಂಡಳು. ನಂತರ ಅವಳನ್ನೇ ದಿಟ್ಟಿಸಿ ನೋಡುತ್ತಿದ್ದ ನನ್ನ ನೆನಪಾಗಿ, ಕತ್ತೆತ್ತಿ ನನ್ನ ಕಣ್ಣುಗಳನ್ನೇ ನೋಡುತ್ತ ನುಡಿದಳು!

“ಆವತ್ತು ಪಿ.ಜಿ.ಗೆ ಹೋದ ತಕ್ಷಣ, ಮೊಬೈಲ್ ಕಳ್ಕೊಂಡಿದ್ದು ಗೊತ್ತಾಗಿ, ಎಷ್ಟೊಂದೆಲ್ಲ ಪ್ರಯತ್ನ ಮಾಡಿದೆ ಗೊತ್ತಾ ನನ್ನ ನಂಬರ್‌ಗೆ ಫೋನ್ ಮಾಡೋಕೆ? ಬರೀ ‘ಸ್ವಿಚ್ಡ್ ಆಫ್’ ಅಂತಾ ಬರುತ್ತಿತ್ತು?” ಅವಳ ಪ್ರಶ್ನೆಯಲ್ಲಿ ನನ್ನೆಡೆಗೇನಾದರೂ ಸಂಶಯವಿತ್ತಾ, ಆ ಕ್ಷಣಕ್ಕೆ ನನಗೆ ಗೊತ್ತಾಗಲಿಲ್ಲ.

ನಾನು ತಡಬಡಾಯಿಸಿಯಾದರೂ ಥಟ್ಟನೆ ಉತ್ತರ ಕೊಟ್ಟೆ, “ಹೌದಾ? ನಿಜ ಹೇಳ್ಬೇಕಂದ್ರೆ, ಕಳ್ಕೊಂಡಿರೋರು ಖಂಡಿತಾ ಫೋನ್ ಮಾಡಿಯೇ ಮಾಡ್ತಾರೆ ಅಂತಾ ನಾನು ಮೊಬೈಲ್ ಆನ್ ಮಾಡಿಯೇ ಇಟ್ಟುಕೊಂಡಿದ್ದೆ!”, ನಂತರ ಥಟ್ಟನೆ ಏನನ್ನೋ ನೆನಪಿಸಿಕೊಂಡವನಂತೆ ನುಡಿದೆ, “ಓಹ್! ಅವತ್ತು ಇಲ್ಲಿಂದ ಹೊರಟು ನಾನು ಸೀದಾ ಸಾಗರ್ ಅಪೋಲೋ ಹಾಸ್ಪಿಟಲ್‌ಗೆ ಹೋಗಿದ್ದೆ, ಸ್ನೇಹಿತನೊಬ್ಬ ಅಡ್ಮಿಟ್ ಆಗಿದ್ದ. ಅವನನ್ನ ಅಟೆಂಡ್ ಮಾಡೋಕೆ ಅವತ್ತಿಡೀ ಮತ್ತು ರಾತ್ರಿ ಅಲ್ಲೇ ಇದ್ದೆ ನಾನು! ಸಾಮಾನ್ಯವಾಗಿ, ಹಾಸ್ಪಿಟಲ್‌ಗಳಲ್ಲಿ ಮೊಬೈಲ್ ಸಿಗ್ನಲ್ಸ್ ಸಿಗೋಲ್ಲ!”

ಅವತ್ತು ಸಿನೇಮಾದ ನಂತರ ನಾನು ನನ್ನ ಇನ್ನೊಬ್ಬ ಸ್ನೇಹಿತನನ್ನು ನೋಡಲು ಆಸ್ಪತ್ರೆಗೆ ಹೋಗಿದ್ದು ನಿಜವಾದರೂ, ರಾತ್ರಿಯನ್ನೇನು ಅಲ್ಲಿ ಕಳೆದಿರಲಿಲ್ಲ, ಅದಕ್ಕಿಂತಲೂ ಅವಳ ಮೊಬೈಲ್ ಸಿಕ್ಕ ನಿಮಿಷದಲ್ಲೇ ಅದನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದೆನಲ್ಲ! ನಾನು ಸುಳ್ಳು ಹೇಳಿದುದರ ಪಾಪ ನನ್ನ ಆ ಪಾಪದ ಸ್ನೇಹಿತನಿಗೇ ತಟ್ಟಬೇಕು!

ಅವಳು ನನ್ನ ಸಮಜಾಯಿಷಿಯನ್ನು ಅವಳು ನಂಬಿದಂತೆ ಕಾಣಲಿಲ್ಲ. ನನಗೆ ಯಾಕೋ ‘ರ್‍ಯಾಟಾಟೂಯಿ’ ಪ್ಲಾನು ಟುಸ್ಸಾಯ್ತು ಅನಿಸತೊಡಗಿತು. ನಾನು ಇನ್ನಷ್ಟು ಸಾಕ್ಷ್ಯಾಧಾರಗಳನ್ನು ಕೊಡ ಹೊರಟೆ, “ಆಮೇಲೆ ಈ ಮೊಬೈಲಿನ ಬ್ಯಾಟರಿ ಸತ್ತು ಹೋಯಿತು, ನನ್ಹತ್ರ ಇದಕ್ಕಾಗೋ ಚಾರ್ಜರ್ ಬೇರೆ ಇರಲಿಲ್ಲ. ಒಂದ್ವಾರ ಊರಲ್ಲಿರಲಿಲ್ಲ. ಊರಿಂದ ಬಂದವನೇ ಪೇಚಾಡಿಕೊಂಡು ಎಲ್ಲೆಲ್ಲಿಂದಲೋ ಚಾರ್ಜರ್ ಹುಡುಕ್ಕೊಂಡು ಮೊಬೈಲ್ ಆನ್ ಮಾಡಿದೆ, ನಿನ್ನದೇ ಮೊದಲನೇ ಕರೆ!” ನಾನು ನಕ್ಕೆ, ಪ್ರತಿಯಾಗಿ ಅವಳೂ ನಕ್ಕಳು, ಯಾಕೋ ಅವಳ ನಗು, ಅಸಹಜ–ಯಾಂತ್ರಿಕ–ಗಿಲೀಟಿನದು ಅನಿಸಿತು. ಆದರೂ ಇನ್ನೂ ನನ್ನ ತಲೆಯೊಳಗೆ ಕಡೇ ಪಕ್ಷ ‘ಮ್ಯಾಕ್ ಡೊನಾಲ್ಡ್’ ನ ಪ್ಲಾನು ಕುಣಿದು ಕುಪ್ಪಳಿಸುತ್ತಿತ್ತು. ಆದರೆ ಅದರ ಆಮಂತ್ರಣವನ್ನು ಹೇಗೆ ಶುರುಮಾಡುವುದು ಹೇಗೆಂದು ಗೊತ್ತಾಗದೇ ಅಯೋಮಯನಾಗಿ ನಿಂತೆ!

‘ಥ್ಯಾಂಕ್ಸ್, ಥ್ಯಾಂಕ್ಯೂ ವೆರಿ ಮಚ್! ಈ ನಿಮ್ಮ(ನ್ನ) ಉಪಕಾರಾನ ನಾನು ಜನ್ಮ ಜನ್ಮಾಂತರದಲ್ಲಿ ಮರೆಯಲ್ಲ! ನಿಮ್ಮ(ನ್ನ) ನಂಬರ್ ಏನಂದ್ರೀ(ದೇ)? ಓ ಹೌದಾ? ಆಗಾಗ ಮೆಸೇಜ್ ಕಳಿಸ್ತಾ ಇದ್ರೆ ಬೇಜಾರಿಲ್ಲ ತಾನೇ ನಿಮ(ನ)ಗೆ? ಓ ಶ್ಯೂರ್ ಅದಕ್ಕೇನಂತೆ? ಕಾಫಿ–ಡೇ ಬೇಡ ನಾನಿನ್ನೂ ಊಟ ಮಾಡಿಲ್ಲ, ಟ್ರಾನ್ಸಿಟ್‌ಗೋ, ಮ್ಯಾಕ್ ಡೋನಾಲ್ಡ್ಸ್‌ಗೋ ಹೋಗೋಣ್ವಾ?...’ ಅವಳ ಸಂಭಾವ್ಯ ಮಾತುಗಳೆಲ್ಲ ಹೀಗೆ ನನ್ನ ತಲೆಯಲ್ಲಿ ಲಗಾಟಿ ಹೊಡೆಯುತ್ತಿದ್ದರೆ ಅವಳು ಉದ್ಗರಿಸಿದಳು,

“ಥ್ಯಾಂಕ್ ಗಾಡ್! ಏನಾದ್ರೂ ಆಗ್ಲಿ, ನನ್ನ ಮೊಬೈಲ್ ಸಿಕ್ಕಿತಲ್ಲಾ. ಎಷ್ಟೊಂದು ಖುಷಿಯಾಗ್ತಿದೆ ಗೊತ್ತಾ ನಂಗೆ?” ಇದ್ಯಾವ ಧನ್ಯವಾದ ಹೇಳುವ ಪರಿ ಅಂತಾ ಚಕಿತನಾದೆ ನಾನು, ಹಸ್ತ ಲಾಘವಕ್ಕೆ ಮೆಲ್ಲನೆ ನನ್ನ ಬಲಗೈ ಚಾಚಿದೆ! ಅವಳು ಅದನ್ನು ನೋಡಿ, ಒಂಥರಾ ಮುಖ ಮಾಡಿಕೊಂಡು, ನನ್ನ ಕೈ ಹಿಡಿದು ಕುಲುಕಿದಳು. ಅವಳ ಸಣ್ಣ, ಮೃದು ಕೈಯ ಮರು ಸ್ಪರ್ಶಕ್ಕೆ ಮತ್ತೇರಿದಂತಾಗಿ ನಾನು ಏನನ್ನಾದರೂ ಮಾತನಾಡೋಣವೆಂದೂ, ಏನು ಮಾತನಾಡುವುದೆಂದೂ, ಹೇಗೆ ಶುರುಮಾಡುವುದೆಂದೂ ತಿಳಿಯದೇ ನಿಂತುಬಿಟ್ಟೆ.

ಹೀಗೆ ನಾನು ಅಯೋಮಯನಾಗಿ, ದೀನ–ನೇತ್ರನಾಗಿ, ನಿರೀಕ್ಷೆಯ ಪೆಚ್ಚು ನಗೆಯ ಮುಖ ಹೊತ್ತು, ಬೆವರುತ್ತ ನಿಂತಿರುವಾಗ ನನ್ನೆದುರು ನಮ್ಮ ಸುತ್ತ ಮುತ್ತ ನಡೆಯುತ್ತಿದ್ದ ಇತರ ಲೋಕವ್ಯಾಪಾರಗಳೆಲ್ಲ, ಸಂಗತಿಗಳೆಲ್ಲ ನನಗೆ ಮಸುಕು–ಮಸುಕಾದಂತಾಗಿ, ಎಲ್ಲವೂ ಅತೀ ನಿಧಾನ ಗತಿಯಲ್ಲಿ ನಡೆಯುತ್ತಿರುವ ಫಿಲ್ಮಿನಂತೆ ತೋರಿತು. ಆ ಮಸುಕು ಚಿತ್ರಣದೊಳಗೇ ಸ್ಪಷ್ಟವಾದುದೊಂದು ಸಂಗತಿ ಜರುಗಿತು. ನಾವಿಬ್ಬರೂ ನಿಂತಿದ್ದ ಪಕ್ಕಕ್ಕೇ ದೈತ್ಯಾಕಾರಿಯಾದ ಬೈಕೊಂದು ಬಂದು ನಿಂತಿತು, ಅದರ ಮೇಲಿದ್ದ ದೃಢದೇಹಿ, ಬೈಕನ್ನು ಬೇಕಂತಲೇ ಬಾಗಿಸಿ ನಿಲ್ಲಿಸಿ, ನನ್ನ (!) ಹುಡುಗಿಯೆಡೆಗೆ ನೋಡಿ ನಸುನಕ್ಕ. ನನಗೆ ಮೈ ಉರಿದು ಹೋಗುವಷ್ಟು ಸಿಟ್ಟು ಬಂತು. ಸ್ವಲ್ಪವಾದರೂ ಮಾನ ಮರ್ಯಾದೆ ಬೇಡವೇ? ಬೀದಿ ಕಾಮಣ್ಣನಿರಬೇಕು, ಇವನನ್ನು ವಿಚಾರಿಸಿಕೊಂಡರೆ ಈ ಹುಡುಗಿಯ ದೃಷ್ಟಿಯಲ್ಲಿ ನನ್ನ ಠೇವಣಿ ಅಮಿತಾಮಿತವಾಗುವುದರ ಬಗೆಗೆ ನನಗೆ ಸ್ವಲ್ಪವೂ ಸಂಶಯವಿರಲಿಲ್ಲ. ಆದರೆ ಬೈಕಿನ ಮೇಲಿದ್ದ ಹುಡುಗ ನನಗಿಂತ (ನನ್ನ ಕಣ್ಣುರಿಯುವಷ್ಟು) ಚೆನ್ನಾಗಿದ್ದ ಮತ್ತು (ಮೊದಲೇ ದೈತ್ಯ ದೇಹಿ ಅಂತ ಕರೆದಿದ್ದೇನೆ) ನನಗಿಂತ ಬಲವಾಗಿದ್ದ! ಅವನನ್ನು ಕೆಣಕಿ, ಇವಳ ಠೇವಣಿ ಗಿಟ್ಟಿಸುವ ಬದಲು (ನನ್ನವೇ) ಹಲ್ಲುಗಳ ಲೆಕ್ಕ ಹಾಕುವಂತಾದರೆ ಏನು ಗತಿ ಎಂದುಕೊಂಡರೂ ಸುಮ್ಮನಿರಲಾರದೇ ಮೆಲ್ಲನೇ ಮುಂದುವರೆದು ಅವನನ್ನು ಗದರಿಸಲು ಬಾಯಿ ತೆರೆದೆ.

"ಏನು? ಮೊಬೈಲ್ ಸಿಕ್ಕಿತಾ?" ನಾನಲ್ಲ, ಅವಳ ಭುಜ ತಾಕುವಂತೆ ಅವಳ ಹಿಂದಕ್ಕೆ ಬಂದು ನಿಂತ ಅವನು ಕೇಳಿದ– ಅವಳನ್ನ.

ಅವಳು ನಾನು ಇದುವರೆಗೂ ನೋಡಿರದಿದ್ದ ಅಪ್ಪಟ ಚಿನ್ನದಂತಹ ನಗುವೊಂದನ್ನು ಬಿಸಾಕಿ, "ಹೂಂ!" ಅಂದಳು.

'ಎಲಾ ಇವಳಾ? ಇವನೊಡನೆ ಮಾತನಾಡುತ್ತಿದ್ದಾಳೆ, ಅಸಲಿಗೆ ಯಾರಿವನು?' ಅಂತೆಲ್ಲ ನಾನು ಬೆಪ್ಪಾಗಿ ಯೋಚಿಸುತ್ತಿರುವಾಗಲೇ ಅವನು ಮತ್ತೆ ಮಾತನಾಡಿದ, "ಹೋಗೋಣ್ವಾ, ಹಾಗಾದ್ರೆ?".

ಅವಳು ಹೂಂಗುಟ್ಟುತ್ತ ಅವನ ಚಾಚಿದ ಮೊಣಕೈ ಕೊಂಡಿಯೊಳಕ್ಕೆ ತನ್ನ ಮೊಣಕೈ ಕೊಂಡಿಯನ್ನು ಸಿಕ್ಕಿಸಿಕೊಳ್ಳುತ್ತ, ಕೊನೆಯ(!) ಧನ್ಯವಾದದ ಮಾತಿರಲಿ, ನನ್ನೆಡೆಗೆ ಒಂದು ನೋಟವನ್ನೂ ಎಸೆಯದೇ ಪಾರ್ಕಿಂಗ್ ಲಾಟ್‌ನಿಂದ ಅದೇ ಮ್ಯಾಕ್– ಡೊನಾಲ್ಡ್ ಕಡೆಗೆ ನಡೆದಳು.

ಇದೆಲ್ಲ ಎಷ್ಟೊಂದು ವೇಗವಾಗಿ ನಡೆದುಹೋಯಿತೆಂದರೆ, ಏನಾಗುತ್ತಿದೆ ಅಂತಾ ನನಗೆ ಗೊತ್ತಾಗುವಷ್ಟರಲ್ಲಿ ಅವರಿಬ್ಬರೂ ಹೆಗಲಿಗೆ ಹೆಗಲು ಗಂಟು ಹಾಕಿಕೊಂಡು ನಾಲ್ಕೈದು ಮಾರು ದೂರ ಹೋಗಿಯಾಗಿತ್ತು. ಅವಳು ನನ್ನ ಬಗ್ಗೆ ಏನು ಹೇಳಿದಳೋ, ಅವನು ಅಲ್ಲಿಂದಲೇ ಹಿಂದಿರುಗಿ ನನ್ನನ್ನು ಒಂದು ಕೆಟ್ಟ ಹುಳುವಿನಂತೆ ನೋಡಿದ. ಅವನು ತನ್ನ ಬಿರುಗಣ್ಣ ದೃಷ್ಟಿಯಲ್ಲೇ ನನ್ನ ಮುಸುಡಿಗೆ ಬಲವಾದ ಮುಷ್ಠಿಗುದ್ದು ಕೊಟ್ಟಂತಾಗಿ, ನಾನು ಬೆಚ್ಚಿ ಬೆದರಿ ಥಟ್ಟನೆ ವಾಸ್ತವಕ್ಕೆ ಮರಳಿದೆ. ನನ್ನ ಕೈಬೆರಳ ತುದಿಯಲ್ಲಿ ಆ ಹುಡುಗಿಯ ಹಸ್ತ ಲಾಘವದ ಬಿಸುಪಿನ್ನೂ ಇತ್ತು. ತಲೆಯೊಳಗೆ ಮೊದಲೇ ತಿಳಿದಿಟ್ಟುಕೊಂಡಿದ್ದ ಅವಳ ಮೊಬೈಲ್ ನಂಬರಿನ ಅಂಕಿಗಳು, 'ನಾವಿನ್ನೂ ನಿನ್ನ ಸ್ಮೃತಿಯಲ್ಲಿದ್ದೇವೆ' ಅನ್ನುತಿದ್ದವು. ಉಪಯೋಗವಿಲ್ಲ ಎಂದುಕೊಂಡು ನಾನು ಅವೆಲ್ಲ ಅಂಕಿಗಳೂ ಉದುರಿ ಹೋಗುವಂತೆ ತಲೆ ಕೊಡವಿಕೊಂಡೆ, ತಕ್ಷಣ ಜ್ಞಾನೋದಯವಾಯ್ತು! ಸಿಕ್ಕಿದ ಒಂದೊಳ್ಳೇ ಮೊಬೈಲೂ ನನ್ನ ಮೂರ್ಖತನದಿಂದಾಗಿ ದಕ್ಕಲಿಲ್ಲವಲ್ಲ ಎಂಬ ಹಳಹಳಿ ಶುರುವಾಯಿತು ಮತ್ತು 'ಪ್ರತಿಯೊಬ್ಬ ಸುಂದರ ಹುಡುಗಿಯ ಹಿಂದೆ ನನಗಿಂತ ಬಲಾಢ್ಯ ಮತ್ತು ನನಗಿಂತ ಸುಂದರವಾಗಿರೋ ಅವಳ ಬಾಯ್ ಫ್ರೆಂಡ್ ಇರ್ತಾನೆ!' ಎಂಬ ಪರಮಸತ್ಯದ ಅರಿವಾಯಿತು!

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** shivuks@gmail.com